ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**ಸಂಕೇತ ಸಂಖ್ಯೆ : 62-K**
**Code No. : 62-K**

**A**

**CCE RR**
**REVISED**

Question Paper Serial No. **30**

ಇಲ್ಲಿಂದ ಕತ್ತರಿಸಿ

# ವಿಷಯ : ತೃತೀಯ ಭಾಷೆ — ಕನ್ನಡ
# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 25. 09. 2020 ] [ Date : 25. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಕೆಳಗಿನವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರವುಳ್ಳ ಪದ

   (ಎ) ಸಜ್ಜನ (ಬಿ) ಉನ್ನತ

   (ಸಿ) ಆಶ್ರಯ (ಡಿ) ಅಪ್ಪಣೆ

2. ವಿದ್ಯಾರ್ಥಿಗಳು ಶಾಲೆಯಲ್ಲಿ 'ವಿಶ್ವ ಪರಿಸರ' ದಿನಾಚರಣೆಯನ್ನು ಆಚರಿಸಿದರು. – ಈ ವಾಕ್ಯದಲ್ಲಿ ಸಪ್ತಮೀ ವಿಭಕ್ತಿಯಿಂದ ಕೂಡಿದ ಪದ

   (ಎ) ದಿನಾಚರಣೆಯನ್ನು (ಬಿ) ವಿಶ್ವ ಪರಿಸರ

   (ಸಿ) ಶಾಲೆಯಲ್ಲಿ (ಡಿ) ವಿದ್ಯಾರ್ಥಿಗಳು

3. ಬರವಣಿಗೆಯಲ್ಲಿ ಹರ್ಷ, ಅಚ್ಚರಿ, ದುಃಖ, ಕೋಪ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಲೇಖನ ಚಿಹ್ನೆಯನ್ನು ಹೀಗೆಂದು ಕರೆಯುತ್ತಾರೆ

   (ಎ) ಪೂರ್ಣವಿರಾಮ (ಬಿ) ಭಾವಸೂಚಕ

   (ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ

4. 'ಪರಿಚಿತ' ಪದದ ವಿರುದ್ಧ ಪದ

   (ಎ) ಅಪರಿಚಿತ (ಬಿ) ಸುಪರಿಚಿತ

   (ಸಿ) ಕುಪರಿಚಿತ (ಡಿ) ಪರಾಜಿತ

5. 'ಪ್ರಣತಿ' ಪದದ ತದ್ಭವ ರೂಪ

   (ಎ) ಪ್ರಣತೆ (ಬಿ) ಆರತಿ

   (ಸಿ) ಜ್ಯೋತಿ (ಡಿ) ಹಣತೆ

6. 'ಗೌರಿಯ ಮುಖ ಕಮಲದಂತೆ ಅರಳಿತು.' – ಈ ವಾಕ್ಯದಲ್ಲಿರುವ ಅಲಂಕಾರ

   (ಎ) ಶಬ್ದಾಲಂಕಾರ (ಬಿ) ಉಪಮಾಲಂಕಾರ

   (ಸಿ) ರೂಪಕಾಲಂಕಾರ (ಡಿ) ಚಿತ್ರಕವಿತ್ವ

7. ಬೀಚಿಯವರು ತಮಗೆ ಓದಲು ಇನ್ನೂ ಆಗಿಲ್ಲವೆಂದು ಹೇಳಿರುವ ಶಿವರಾಮ ಕಾರಂತರ ಕೃತಿ

(ಎ) ಅಳಿದ ಮೇಲೆ (ಬಿ) ಮರಳಿ ಮಣ್ಣಿಗೆ

(ಸಿ) ಬೆಟ್ಟದ ಜೀವ (ಡಿ) ಮೂಕಜ್ಜಿಯ ಕನಸುಗಳು

8. ಜನಪದರ ಪ್ರಕಾರ ಮೂಡಣದ ಮೋಡದ ಚೆಂದವು ಹೀಗಿದೆ

(ಎ) ಸಪ್ಪೆದಂಟ್ಹಂಗೆ (ಬಿ) ಗೋಡೆಗೆ ಬಿಳಿಬಳಿದ್ಹಂಗೆ

(ಸಿ) ಬೋರಾಡುವ್ಹಂಗೆ (ಡಿ) ಗೋಡೆಗೆ ಕಪ್ಪುಬಳಿದ್ಹಂಗೆ

II. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

9. ಸತ್ಯವ ನುಡಿವುದು : ದೇವಲೋಕ :: ಮಿಥ್ಯವ ನುಡಿವುದು : ......................... .

10. ಹಜರತ್ ಇಮಾಮ್ : ಹಾಜುಮ್ :: ಶರೀಫರು : ......................... .

11. ಕುರ್ಚಿ : ಹಿಂದೂಸ್ತಾನಿ ಪದ :: ಕವರು : ......................... .

12. ರವೀಂದ್ರ : ಸವರ್ಣದೀರ್ಘ ಸಂಧಿ :: ನರೇಂದ್ರ : ......................... .

III. **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $4 \times 1 = 4$

13. ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಏಕೆ ಬಂದರು ?

14. ಎಂತಹ ಬಾಳನ್ನು ಕಟ್ಟುತ್ತೇವೆ ಎಂದು 'ಕಟ್ಟತೇವ ನಾವು' ಕವಿತೆಯು ಭರವಸೆ ನೀಡುತ್ತದೆ ?

15. ಈರಪ್ಪ. ಎಂ. ಕಂಬಳಿಯವರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು ?

16. ಪುಲಿಗೆರೆ ಸೋಮನಾಥನು ಪದ್ಯಗಳಲ್ಲಿ ಬಳಸಿರುವ ಅಂಕಿತ ಯಾವುದು ?

IV. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 8 × 2 = 16

17. ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಿನಿಪೊಲೀಸ್ ನಗರದಲ್ಲಿ ಏಕೆ ದಾರಿ ತಪ್ಪಿಸಿಕೊಂಡರು ?

18. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆಯನ್ನು ಕುರಿತು ಬರೆಯಿರಿ.

19. ವಿದೇಶಿ ಪ್ರವಾಸಿಯು ರಾಣಿ ಅಬ್ಬಕ್ಕರನ್ನು ಕುರಿತು ಏನೆಂದು ಬರೆದಿದ್ದಾನೆ ?

20. ಕಿತ್ತೂರು ಚೆನ್ನಮ್ಮ ಸೆರೆಯಾದುದೇಕೆ ?

21. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?

22. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ ?

23. ಕವಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು ಹೊಕ್ಕೊಡನೆಯೇ ಆದ ಅನುಭವವನ್ನು ತಿಳಿಸಿ.

24. ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಯೇನು ?

V. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ :** 2 × 3 = 6

25. "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ".

26. "ಅಪ್ಪ ನೀ ಬಂದು ಕರುಣೀಸೊ."

VI. **ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 4 × 3 = 12

27. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.

28. ಬೀಚಿಯವರು 'ಯಕ್ಷಪ್ರಶ್ನೆ' ಕೃತಿಯನ್ನು ದಯವಿಟ್ಟು ಓದಿ ಎಂದು ಏಕೆ ಹೇಳಿದ್ದಾರೆ ?

29. ಗ್ರಂಥಾಲಯದ ಬಗ್ಗೆ ಕವಿ ಸಿ.ಪಿ.ಕೆ.ಯವರು ವ್ಯಕ್ತಪಡಿಸಿರುವ ಭಾವನೆಗಳನ್ನು ಕುರಿತು ಬರೆಯಿರಿ.

30. ಬಸವಣ್ಣನವರ ವಚನಗಳಲ್ಲಿ ನೀವು ಮೆಚ್ಚಬಹುದಾದ ಮಾನವೀಯ ಮೌಲ್ಯಗಳಾವುವು ?

VII. **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

31. ಆರ್.ಎಸ್. ಸುಂಕದ

32. ಸತೀಶ ಕುಲಕರ್ಣಿ

VIII. **ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ *ಒಂದನ್ನು* ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

33. ಹಾಸಿಗೆ ಇದ್ದಷ್ಟು ಕಾಲು ಚಾಚು.

***ಅಥವಾ***

ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.

IX. **ಕೆಳಗಿನ ಒಂದು ಪ್ರಶ್ನೆಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $1 \times 4 = 4$

34. ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.

***ಅಥವಾ***

ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿರಿ.

X. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

35. ಕಂಚುಗಾರನ ..................................................

.................................................................

.................................................................

......................................... ಪೂಜೆ ಮಾಡುವುದು

***ಅಥವಾ***

ನಾನು ಎಂಬುದ ...............................................

.................................................................

.................................................................

.............................................. ಕಾರ್ಯಗಳೆಲ್ಲವು

XI. **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

$4 \times 1 = 4$

ವ್ಯಕ್ತಿಗೆ ತನ್ನ ಬದುಕಿನಲ್ಲಿ ನೆಮ್ಮದಿ, ಸಂತಸ, ತೃಪ್ತಿಯನ್ನು ಒದಗಿಸುವ ಮನೋರಂಜನೆಯ ಮಾಧ್ಯಮವೇ ಕಲೆ. ದೇಶ, ಕಾಲವನ್ನು ಮೀರಿದ ಜನಪ್ರಿಯತೆ ಕಲೆಗಿದೆ. ಜನಸಾಮಾನ್ಯರ ಆಚಾರ–ವಿಚಾರ, ರೀತಿ–ನೀತಿ, ನಂಬಿಕೆ–ಸಂಪ್ರದಾಯಗಳ ಅಭಿವ್ಯಕ್ತಿಯೇ ಜನಪದ ಕಲೆ. ವ್ಯಕ್ತಿಯ ಪ್ರತಿದಿನದ ದುಡಿಮೆಯ ಆಯಾಸ, ಆಸರಿಕೆ, ಬೇಸರಿಕೆಗಳನ್ನು ಜನಪದ ಕಲೆಗಳು ನಿವಾರಿಸುತ್ತವೆ. ಜನಪದ ಕಲೆಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳಲ್ಲಿ ಕರಾವಳಿ ಪ್ರದೇಶದ ಪ್ರಸಿದ್ಧ ಕಲೆಯಾದ 'ಯಕ್ಷಗಾನ'ವೂ ಒಂದು. ಯಕ್ಷಗಾನವು ನೃತ್ಯ ಪ್ರಧಾನ ಕಲೆಯಾಗಿದ್ದು, ಶಾಸ್ತ್ರೀಯ ಚೌಕಟ್ಟಿಗೆ ಒಳಪಟ್ಟಿದೆ. ಹಾಡು, ಕುಣಿತ, ವೇಷಭೂಷಣ, ಮಾತು, ವಾದ್ಯ ಇವು ಯಕ್ಷಗಾನದ ಪಂಚ ಅಂಗಗಳು. ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಬಡಗುತಿಟ್ಟು ಎಂಬ ಮೂರು ಪ್ರಕಾರಗಳಿವೆ.

36. *ಪ್ರಶ್ನೆಗಳು :*

ಎ) ವ್ಯಕ್ತಿಯ ಮನೋರಂಜನೆಯ ಮಾಧ್ಯಮ ಯಾವುದು ?

ಬಿ) ಯಾವುದನ್ನು ಮೀರಿದ ಜನಪ್ರಿಯತೆ ಕಲೆಗಿದೆ ?

ಸಿ) ಯಕ್ಷಗಾನವು ಯಾವ ಪ್ರದೇಶದ ಪ್ರಸಿದ್ಧ ಜನಪದ ಕಲೆಯಾಗಿದೆ ?

ಡಿ) ಯಕ್ಷಗಾನದ ಮೂರು ಪ್ರಕಾರಗಳನ್ನು ಹೆಸರಿಸಿ.

XII. **ಕೆಳಗಿನ ಯಾವುದಾದರೂ *ಒಂದು* ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** $1 \times 4 = 4$

37. ರಾಷ್ಟ್ರೀಯ ಹಬ್ಬಗಳ ಮಹತ್ವ.

***ಅಥವಾ***

ಪ್ಲಾಸ್ಟಿಕ್ ವಸ್ತುಗಳ ಬಳಕೆಯ ದುಷ್ಪರಿಣಾಮಗಳು.

XIII. **ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** 1 × 5 = 5

38. ನಿಮ್ಮನ್ನು ಕನಕಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ 'ಅಕ್ಷಯ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ಹಾಳಾದ ರಸ್ತೆಯನ್ನು ಸರಿಪಡಿಸುವಂತೆ ಕೋರಿ, ತಾಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಯಾದಗಿರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ 'ಆದಿತ್ಯ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಕುರಿತು ಸಾಗರದಲ್ಲಿ ವಾಸವಿರುವ ನಿಮ್ಮ ತಂದೆ 'ರವಿಕುಮಾರ' ಎಂಬುವವರಿಗೆ ಒಂದು ಪತ್ರವನ್ನು ಬರೆಯಿರಿ.